300-400 ರೂಪಾಯಿಗಳನ್ನು ಕೊಟ್ಟು ನೇಮಕ ಮಾಡಿಕೊಂಡರು. ಅವರುಗಳು 4-5 ವರ್ಷಗಳ ಕಾಲ ಕೆಲಸ ಮಾಡಿದ್ದಾರೆ.

ಈಗ ನಾನು ಒತ್ತಾಯ ಮಾಡುವುದೇನೆಂದರೆ ಸರ್ಕಾರದವರು 15-20 ಸಾವಿರ ಜನ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುತ್ತೇವೆ ಎನ್ನತಕ್ಕ ಹೇಳಿಕೆಯನ್ನು ಕೊಟ್ಟಿದ್ದಾರೆ. ಕೆಲವನ್ನು ನೇಮಕ ಮಾಡಿಕೊಳ್ಳುವವರಿದ್ದೀರಿ. ಈ ಸಂದರ್ಭದಲ್ಲಿ ಅವರಿಗೂ ಕೂಡ ಆಧ್ಯತೆಯನ್ನು ಕೊಡಬೇಕು. ಅದನ್ನು ಕೊಡಲು ಸಾಧ್ಯವೇ?

ಶ್ರೀ ಎಂ. ವೀರಪ್ಪ ಮೊಯಿಲಿ : ಅಧ್ಯಕ್ಷರೆ, ವೆಯ್‌ಟೇಜನ್ನು ಕೊಡುತ್ತಿದ್ದೇವೆ. ಆದರೆ ಆಧ್ಯತೆಯನ್ನು ಕೊಡಲು ಕಷ್ಟವಾಗುತ್ತದೆ. ಅರ್ಧ ಅಂಕದ ವೆಯ್‌ಟೇಜ್‌ನ್ನು ಕೊಡುತ್ತಿದ್ದೇನೆ. ಗರಿಷ್ಟ ವಯೋಮಿತಿಯ ಮಿತಿಯನ್ನು ಹಾಕುವುದಿಲ್ಲ. ಈ ಎರಡು ವಿಚಾರದಲ್ಲಿ ಮಾತ್ರ ವಿನಾಯತಿಯನ್ನು ಕೊಡಬಹುದು. ಆದರೆ ಆಧ್ಯತೆಯನ್ನು ಕೊಡುವುದು ಮಾತ್ರ ಬಹಳ ಕಷ್ಟವಾಗುತ್ತದೆ.

ಅಧ್ಯಕ್ಷರು : ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳವರ ಪ್ರಶ್ನೆಗಳನ್ನು ಮೊದಲು ಮುಗಿಸುತ್ತೇನೆ, ಅವರು ಆ ಮನೆಗೆ ಹೋಗಬೇಕಾಗಿದೆ.

ಬೆಲೆ ಏರಿಕೆ ಬಗ್ಗೆ

415 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಆಹಾರ ಪದಾರ್ಥಗಳ ಬೆಲೆ ಗಗನಕ್ಕೆ ಏರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಅವುಗಳ ಬೆಲೆ ನಿಯಂತ್ರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು?*

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಬಂದಿದೆ.

ಆ) ಮುಕ್ತ ಮಾರುಕಟ್ಟೆಯಲ್ಲಿ ಅಗತ್ಯ ವಸ್ತುಗಳ ಬೆಲೆಗಳನ್ನು ಹತೋಟಿಯಲ್ಲಿಡಲು ಅಗತ್ಯ ವಸ್ತುಗಳಾದ ಅಕ್ಕಿ, ಗೋಧಿ, ಮತ್ತು ಸೀಮೆಎಣ್ಣೆ ತಾಳಿಎಣ್ಣೆಯನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿಯಲ್ಲಿ ವಿತರಣೆ ಮಾಡಲಾಗುತ್ತಿದೆ. ಅದೂ ಅಲ್ಲದೇ ಕಾಳಸಂತೆ ಮತ್ತು ಅಕ್ರಮ ದಾಸ್ತಾನು ಮಾಡುವವರ ವರ್ತಕರ ಮೇಲೆ ಧಾಳಿ ನಡೆಸಿ, ಅವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ಈ ಬೆಲೆ ಏರಿಕೆಯನ್ನು ತಡೆಗಟ್ಟುವ ಬಗ್ಗೆ ಸರ್ಕಾರ ಏನು ಕ್ರಮಕೈಗೊಂಡಿದೆಯೆಂದು ಕೇಳಿದರೆ ಈ ಉತ್ತರ ಕೊಟ್ಟಿದ್ದಾರೆ. ಈ ಉತ್ತರದಿಂದ ಬೆಲೆ ಏರಿಕೆಯನ್ನು ತಡೆಗಟ್ಟುವುದಕ್ಕೆ ನಿಮ್ಮ ಕೈಯಲ್ಲಿ ಸಾಧ್ಯವಿಲ್ಲ. ಪ್ರಾಮಾಣಿಕವಾಗಿ ಹೇಳಿ ನೀವು ಏನು ಕೆಲಸಮಾಡುತ್ತಿದ್ದೀರಿ. ಈ ರಾಜ್ಯದ ಜನತೆ ಇವತ್ತಿನ ಬೆಲೆ ಏರಿಕೆಯಲ್ಲಿ ತತ್ತರಿಸಿದ್ದಾರೆ, ತೊಂದರೆಗೆ ಸಿಕ್ಕಿದ್ದಾರೆ. ಇವತ್ತು ಅಸಾಧ್ಯವಾದಂತಹ ಬೆಲೆ ಏರಿಕೆಯಾಗಿದೆ. ಈ ಬಗ್ಗೆ ಸುಮ್ಮನೆ ತಾವು ಪಡಿತರ ಪದ್ಧತಿಯಲ್ಲಿ ಅಕ್ಕಿ ಕೊಡುತ್ತಿದ್ದೇವೆ ತಾಳಿ ಎಣ್ಣೆ ಕೊಡುತ್ತೇವೆ, ರಾಗಿ ಕೊಡುತ್ತೇವೆಂದು ದಮ್ಮಡಿ ಬಾರಿಸಿದರೆ ನಡೆಯುವುದಿಲ್ಲ. ದಯಮಾಡಿ ನಿಮ್ಮ ಪ್ರಾಮಾಣಿಕವಾದಂತಹ ಪ್ರಯತ್ನ ಏನು ಮಾಡಿದ್ದೀರಿ ಅದನ್ನು ಹೇಳಬೇಕು.

ನಿಮ್ಮಿಂದ ಸರಿಯಾದಂತಹ ಉತ್ತರ ಬರಲಿಲ್ಲವೆಂದು ನಾನು ತೀವ್ರವಾಗಿ ಪ್ರತಿಭಟನೆ ಮಾಡಬೇಕಾಗುತ್ತದೆ.

ಶ್ರೀ ಟಿ.ಎನ್. ನರಸಿಂಹಮೂರ್ತಿ : ಮಾನ್ಯ ಅಧ್ಯಕ್ಷರೇ, ಇದು ರಾಷ್ಟ್ರ ವ್ಯಾಪ್ತಿಗೆ ಸಂಬಂಧಪಟ್ಟಂತಹ ವಿಷಯ . ಮತ್ತು ರಾಷ್ಟ್ರಪತಿಯವರು ಪಾರ್ಲಿಮೆಂಟ್ ಉದ್ದೇಶಿಸಿ ಭಾಷಣ ಮಾಡುವಾಗ ಕೂಡ ಈ ಆಹಾರ ವಸ್ತುಗಳ ಬೆಲೆ ಏರಿಕೆಯ ಬಗ್ಗೆ ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಅಂದಮೇಲೆ ಕೇಂದ್ರಸರ್ಕಾರವೂ ಕೂಡ ಬೆಲೆಗಳು ಏನು ಜಾಸ್ತಿಯಾಗುತ್ತಿವೆ ಅದಕ್ಕೆ ತಮ್ಮ ಕಳವಳವನ್ನು ವ್ಯಕ್ತಪಡಿಸಿದೆ. ಮತ್ತು ಯಾವ ದಿಕ್ಕಿನಲ್ಲಿ ಹೆಜ್ಜೆ ಇಟ್ಟರೆ ಬೆಲೆಗಳನ್ನು ಕೆಳಗೆ ಇಳಿಸುವುದಕ್ಕೆ ಸಾಧ್ಯ ಎಂಬ ಬಗ್ಗೆ ಕೂಡ ತಮ್ಮದೇ ಒಂದು ಸೂತ್ರವನ್ನು ಮಾಡುತ್ತಿದ್ದಾರೆ. ಮಾನ್ಯ ಅಧ್ಯಕ್ಷರೇ ರಾಜ್ಯ ಸರ್ಕಾರಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ನಾವು ನಮಗೆ ಬರುವಂತಹ ಆಹಾರ ವಸ್ತುಗಳನ್ನು ವಿತರಣೆ ಮಾಡತಕ್ಕಂಥದ್ದು ಒಂದು. ಆಹಾರ ವಸ್ತುಗಳು ಎಲ್ಲಲ್ಲಿ ಅಕ್ರಮ ದಾಸ್ತಾನು ಆಗಿದ್ದರೆ ಆ ವಿಷಯಗಳ ಬಗ್ಗೆ ಕೂಡ ನಾವು ಕಾನೂನು ಚೌಕಟ್ಟಿನಲ್ಲಿ ಕೆಲಸಮಾಡತಕ್ಕಂಥದ್ದು. ಮತ್ತು ಆಹಾರ ವಸ್ತುಗಳು ನಮಗೆ ಹೆಚ್ಚಿಗೆ ಬೇಡಿಕೆ ಇರುವುದರಿಂದ ಕೇಂದ್ರಸರ್ಕಾರದವರು ನಮಗೆ ಹೆಚ್ಚು ಹೆಚ್ಚು ಅಕ್ಕಿ ಗೋಧಿ ಇವೆಲ್ಲಾ ಆಹಾರ ವಸ್ತುಗಳನ್ನು ಬಿಡುಗಡೆ ಮಾಡಿದರೆ ಹೆಚ್ಚಾಗಿ ಮಾರುಕಟ್ಟೆಗೆ ಬಂದಾಗ ಆಹಾರ ವಸ್ತುಗಳ ಬೆಲೆ ಬಹಿರಂಗ ಮಾರುಕಟ್ಟೆಯಲ್ಲಿ ಕಡಿಮೆಯಾಗುತ್ತದೆ ಎನ್ನುವಂಥದ್ದು ಸಾಧಾರಣವಾಗಿ ಇರುವಂತಹ ಒಂದು ಸೂತ್ರ. ಇದೂ ತಮಗೂ ಗೊತ್ತಿದೆ. ಆದರೂ ಕೂಡ ತಾವು ಆಹಾರ ವಸ್ತುಗಳ ಬೆಲೆಗಳನ್ನು ತಡೆಗಟ್ಟುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಿದ್ದೀರಿ. ಇವತ್ತು ಕೇಂದ್ರಸರ್ಕಾರದ ಆರ್ಥಿಕ ನೀತಿ ಮತ್ತು ಇದರಿಂದಾಗಿ ಬೀಳತಕ್ಕಂಥ ಹಣದುಬ್ಬರ ಇದೆಲ್ಲವೂ ಕೇಂದ್ರ ಸರ್ಕಾರದ ಆರ್ಥಿಕ ಸೂತ್ರಗಳ ಹಿನ್ನೆಲೆಯಲ್ಲಿ ಆಗುತ್ತದೆ. ಮತ್ತು ರಾಜ್ಯ ಸರ್ಕಾರದಿಂದ ಕೂಡ ಈ ಬೆಲೆ ಏರಿಕೆಯನ್ನು ತಗ್ಗಿಸಲಿಕ್ಕೆ ಏನೆಲ್ಲಾ ಪ್ರಯತ್ನ ಮಾಡಬೇಕು ಎನ್ನುವ ಬಗ್ಗೆ ನಾವು ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಇದು ಸುಮ್ಮನೆ ಕಣ್ಣೀರೊರಸತಕ್ಕಂಥ ಮಾತು, ನಿಮ್ಮ ಒಂದು ಭಾಷಣ ಇದು, ಒಂದು ಪ್ರಾಮಾಣಿಕವಾದಂಥ ಚಿಂತನೆ ಬೆಲೆ ಏರಿಕೆಯನ್ನು ತಡೆಗಟ್ಟುವುದಕ್ಕೆ ಇದುವರೆಗೆ ಏನು ನಡೆದಿದೆ. ಅದು ಇಡೀ ರಾಜ್ಯಾದ್ಯಂತ ಕಮ್ಯುನಿಸ್ಟ್ ಪ್ರದರ್ಶನ ಮಾಡುತ್ತಿದ್ದಾರೆ, ಬೇರೆ ಬೇರೆ ವಿರೋಧಪಕ್ಷಗಳು ಪ್ರದರ್ಶನ ಮಾಡುತ್ತಿದ್ದಾರೆ. ಈ ರಾಜ್ಯದಲ್ಲಿ ಬೆಲೆ ಏರಿಕೆಯಿಂದ ಜನ ತತ್ತರಿಸಿದ್ದಾರೆ. ಸಂಬಳ ಬರತಕ್ಕಂಥವರು ಈ ಬೆಲೆ ಏರಿಕೆಯ ಪ್ರಕಾರವಾಗಿ ಜೀವನ ಮಾಡುವುದು ಬಹಳ ಕಷ್ಟವಾಗಿದೆ. ತರಕಾರಿ ಬೆಲೆ, ಹಾಲಿನ ಬೆಲೆ, ಅಕ್ಕಿ ಬೆಲೆ ಗೋಧಿ ಬೆಲೆ ಗಗನಕ್ಕೆ ಹೋಗುತ್ತಿದೆ. ನಿಮಗೆ ಹೇಳುವುದಾದರೆ ಹೋಟೆಲ್‌ನಲ್ಲಿ ತಿಂಡಿ ಬೆಲೆ ಜಾಸ್ತಿಯಾಗಿದೆ. ಚಿಕ್ಕಪೇಟೆಯಲ್ಲಿ ಒಂದು ಮಸಾಲೆ ದೋಸೆಗೆ 25 ರೂಪಾಯಿಯಂತೆ ಮಾರುತ್ತಿದ್ದಾರೆ. ಇನ್ನ ಕೆಲವು ಕಡೆ ಈ ಬೆಲೆ ಉಂಟು. ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ ಇದು ನಿಮ್ಮ ಪ್ರಮುಖವಾದಂತಹ ಪ್ರಯತ್ನವನ್ನು ನಡೆಸುತ್ತಿಲ್ಲ, ಪ್ರಮುಖವಾದಂತಹ ಪ್ರಯತ್ನ ಏನು ಸರ್ಕಾರದ ನಿಯಂತ್ರಣ ಇತ್ತು, ಈ ಬಗ್ಗೆ ಎಷ್ಟು ನಿಯಂತ್ರಣ ಮಾಡಿದ್ದೀರಿ. ನಿಮ್ಮಿಂದ ಸಭೆಗೆ ಉತ್ತರ ಬೇಕು ಬರೀ ಮೊಸಳೆ ಕಣ್ಣೀರು ಸುರಿಸಿದರೆ ಸಾಧ್ಯವಿಲ್ಲ.

ಶ್ರೀ ಟಿ.ಎನ್. ನರಸಿಂಹಮೂರ್ತಿ : ಅಧ್ಯಕ್ಷರೇ, ಈಗ ಸರ್ಕಾರದ ವತಿಯಿಂದ ಹೇಳಿದ್ದೇವೆ. ಏನು ಮಾಡಿದರೆ ಸರಿ ಹೋಗುತ್ತದೆಂದು ಸರ್ಕಾರಕ್ಕಾದರೂ ತಮ್ಮ ಅಭಿಪ್ರಾಯ ಸಲಹೆ ಕೊಡಿ, ಏನು ಮಾಡಿದರೆ ಸರಿ ಹೋಗುತ್ತದೆಂದು. I welcome all your suggestions.

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ : ಆಯಿಲ್‌ಮಿಲ್‌ನಲ್ಲಿ ಇವತ್ತು ಸಾವಿರಾರು ಮೂಟೆ ಕೆಡ್ಲೆಬೀಜ ಇದೆ, ಎಲ್ಲಿ ಹೋಗಿದೆ?

ಡಾ. ಜೀವರಾಜ ಆಳ್ವ : ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ನಮ್ಮ ಹತ್ತಿರ ಏನು ಮಾಡಿದರೆ ಸರಿ ಹೋಗುತ್ತದೆಂದು ಪ್ರಶ್ನೆ ಕೇಳಿದ್ದಾರೆ. ನಿಮ್ಮ ಸರ್ಕಾರದ ರಾಜೀನಾಮೆ ಆದರೆ ಸರಿ ಹೋಗುತ್ತದೆಂದು ಹೇಳಲಿಕ್ಕೆ ಇಷ್ಟಪಡುತ್ತೇನೆ. ನರಸಿಂಹಮೂರ್ತಿಯವರ ಹತ್ತಿರ ಈ ಉತ್ತರವನ್ನು ನಾನು ಅಪೇಕ್ಷೆ ಪಟ್ಟಿಲ್ಲ. ಅಧ್ಯಕ್ಷರೇ ಏನು ಪಡಿತರ ಪದ್ಧತಿಯಲ್ಲಿ ರೈಡ್ ಮಾಡುತ್ತೇವೆಂದು ಏನು ಹೇಳಿದ್ದೀರಿ, ಎಷ್ಟು ರೈಡ್ ಮಾಡಿದ್ದೀರಿ, ಪ್ರೈಸ್ ಇಂಡೆಕ್ಸ್ ಮೇಲೆ ನಮ್ಮ ಸರ್ಕಾರ ಹೋಗಿದೆಯೆಂದು ಹೇಳಿದ್ದಾರೆ, ನಮಗೂ ನಿಮಗೂ ಇರುವಂತಹ ವ್ಯತ್ಯಾಸ ಏನು ಅಂತ ಏನಾದರೂ ಹೇಳಿದ್ದೀರಾ, ಒಂದು ಮೂಲ ಪ್ರಶ್ನೆ ಹೇಳುತ್ತೇನೆ.

ಶ್ರೀಮತಿ ಇಂದಿರಾಗಾಂಧಿಯವರ ಹೆಸರನ್ನು ಹೇಳಿ 3 ಬಣ್ಣದ ಕಾರ್ಡ್‌ನ್ನು ಮಾಡಿದಿರಿ. ಆ ಕಾರ್ಡನ್ನು ಅನೌನ್ಸ್ ಮಾಡಿದಮೇಲೆ ಬೆಲೆಗಳು ಎಷ್ಟು ಮೇಲಕ್ಕೆ ಹೋಗಿವೆ ಎಂಬುದನ್ನು ಹೇಳಿದರೆ ಸಾಕು.

ಶ್ರೀ ಟಿ.ಎನ್. ನರಸಿಂಹಮೂರ್ತಿ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಜೀವರಾಜ ಆಳ್ವರವರು ಮತ್ತು ಮಾನ್ಯ ಜಾಲಪ್ಪನವರು ಒಂದು ನಿರ್ದಿಷ್ಟವಾದ ಉಪ ಪ್ರಶ್ನೆಯನ್ನು ಕೇಳಿದ್ದಾರೆ. ನೀವು ಎಷ್ಟು ಸಾರಿ ಕ್ರಮವನ್ನು ತೆಗೆದುಕೊಂಡಿದ್ದೀರೆಂದು ಕೇಳಿದ್ದಾರೆ. ನನಗೆ ಬಂದಿರತಕ್ಕ ಅಂಕಿಅಂಶಗಳ ಪ್ರಕಾರ 1991ರ ಡಿಸೆಂಬರ್ ತಿಂಗಳ ಅಂತ್ಯದವರೆಗೆ number of raids and cases detected is about 99..

ಶ್ರೀ ಆರ್.ಎಲ್. ಜಾಲಪ್ಪ : ಈ ರಾಜ್ಯದಲ್ಲಿ ಆಯಿಲ್ ಮಿಲ್‌ಗಳು ಎಷ್ಟಿವೆ?

ಶ್ರೀ ಟಿ.ಎನ್. ನರಸಿಂಹಮೂರ್ತಿ : ನೀವು ಕೋಪದಿಂದ ಹೇಳಿದರೆ ಕೆಲಸವಾಗುತ್ತದೆಯೇ ? ಅದನ್ನೇ ಸರಿಯಾಗಿ ಹೇಳಿ. ನನಗೆ ಗೊತ್ತಿರುವಂಥ ಅಂಕಿಅಂಶಗಳನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೆ, ಬೆಲೆಗಳು ಗಗನಕ್ಕೇರುತ್ತಿರುವುದು ವಾಸ್ತವಾಂಶ. 7.50 ರೂ.ಗಿಂತ ಕಡಿಮೆ ಜೋಳ ಎಲ್ಲೂ ಸಿಕ್ಕುವುದಿಲ್ಲ, 8 ರೂ. 8.50 ರೂ.ಗಿಂತ ಕಡಿಮೆ ಅಕ್ಕಿ ಸಿಕ್ಕುವುದಿಲ್ಲ. ಎಣ್ಣೆ 34-35 ರೂ.ವರೆಗೆ ಹೋಗುತ್ತಿದೆ. ಮಂತ್ರಿಗಳು ಹೇಳುತ್ತಿದ್ದಾರೆ, ರಾಜ್ಯಸರ್ಕಾರದವರು ಇದರ ಬಗ್ಗೆ ಏನೂ ಮಾಡುವುದಕ್ಕಾಗುವುದಿಲ್ಲ ಎಂದು. ನಾವು ರೈಡ್ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಇದು ಎಷ್ಟರಮಟ್ಟಿಗೆ ಬೆಲೆಗಳನ್ನು ಕಡಿಮೆ ಮಾಡುವುದಕ್ಕೆ ಸಹಾಯಕವಾಗುತ್ತದೆಂದು ಗೊತ್ತಿಲ್ಲ. ತಮ್ಮಲ್ಲಿ ನನ್ನ ನಿವೇದನೆ ಏನೆಂದರೆ, ಇದರ ಬಗ್ಗೆ ಸಮಗ್ರವಾದ ಚಿಂತನೆಯನ್ನು ಮಾಡಿ ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟರೆ ಅಥವಾ ತಾವು ಇದರ ಬಗ್ಗೆ ಬೇರೆ ರೂಪದಲ್ಲಿ ಡಿಸ್ಕಷನ್‌ಗೆ ಅವಕಾಶವನ್ನು

ಮಾಡಿಕೊಟ್ಟರೆ ಒಳ್ಳೆಯದು. ಇದರ ಬಗ್ಗೆ ಕೇವಲ ವಿರೋಧಪಕ್ಷದವರು ಅಷ್ಟೇ ಅಲ್ಲ ನಾವೂ ಕೂಡ ಬಹಳ ಕಾತುರರಾಗಿದ್ದೇವೆ. ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಹೇಳಿದರು 25 ರೂ. ಮಸಾಲೆ ದೋಸೆ ಆಗಿದೆ ಎಂದು.ಇದು ವಾಸ್ತವಾಂಶ. ಚಾಲುಕ್ಯ ಹೋಟೆಲ್‌ನಿಂದ ಒಂದು ಉದ್ದಿನ ವಡೆಯನ್ನು ತರಿಸಿದರೆ 3-4 ರೂ. ಆಗುತ್ತದೆ. ಆದುದರಿಂದ ಮಾನ್ಯ ಆಹಾರ ಮಂತ್ರಿಗಳು ನಾನು ಏನು ಮಾಡಲಿ ಎಂದು ಹೇಳುವುದಾದರೆ ಈ ಅಸೆಂಬ್ಲಿ ಏತಕ್ಕೆ ಇರಬೇಕು? ಇದು ಇರಬೇಕಾಗಿಲ್ಲ. ಆದುದರಿಂದ ಮಾನ್ಯ ಮುಖ್ಯ ಮಂತ್ರಿಗಳು ಇದಕ್ಕೆ ಒಂದು ಕಾಲವನ್ನು ನಿಗದಿ ಮಾಡಿ ಸಮಗ್ರವಾದ ಅಭಿಪ್ರಾಯಕೊಡತಕ್ಕದ್ದು ಸರ್ಕಾರದ್ದು ರಾಜ್ಯಸರ್ಕಾರ ಎಷ್ಟರಮಟ್ಟಿಗೆ ತನ್ನ ಇತಿಮಿತಿಯೊಳಗೆ ಇದನ್ನು ತರುವುದಕ್ಕೆ ಸಾಧ್ಯವಾಗುತ್ತದೆಂದು ವಿಚಾರ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟರೆ ಒಳ್ಳೆಯದುಯ ಅದುವರೆಗೆ ಈ ಪ್ರಶ್ನೆಯನ್ನು ತಡೆಹಿಡಿಯುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಚರ್ಚೆಗೆ ಒಪ್ಪಿಕೊಳ್ಳಿ.

ಶ್ರೀ ಕೆ.ಹೆಚ್. ರಂಗನಾಥ : ಮಾನ್ಯ ಆಹಾರಮಂತ್ರಿಗಳು ತಮ್ಮ ಅಸಹಾಯಕತೆಯನ್ನು ಹೇಳಿದ್ದಾರೆ.

ಶ್ರೀ ಟಿ.ಎನ್. ನರಸಿಂಹಮೂರ್ತಿ : ನನ್ನ ಅಸಹಾಯಕತೆಯನ್ನು ಯಾವತ್ತೂ ಹೇಳಿಲ್ಲ, ನನ್ನ ಜೀವಮಾನದಲ್ಲೇ ಹೇಳುವುದಿಲ್ಲ, ನಾನು ಹೇಳಿದೆ ಎಂದು ನೀವು ಹೇಳುವುದಕ್ಕೆ ಹೋಗುವುದು ಬೇಡ. ನನ್ನ ಜೀವಮಾನದಲ್ಲೇ ನನ್ನ ಅಸಹಾಯಕತೆಯನ್ನು ಎಲ್ಲೂ ಹೇಳಿಲ್ಲ, ಯಾವತ್ತೂ ಹೇಳಿಲ್ಲ, ಈ ಘಳಿಗೆಯಲ್ಲೂ ಹೇಳಿಲ್ಲ, ನಾನು ಇಷ್ಟುಮಾತ್ರ ಹೇಳುತ್ತೇನೆ. ಮಾನ್ಯ ಸದಸ್ಯರು ಏನು ಸಲಹೆಗಳನ್ನು ಕೊಟ್ಟಿದ್ದಾರೆ ಅವು ಬಹಳ ಒಳ್ಳೆಯ ಸಲಹೆಗಳು. ಮಾನ್ಯ ಮುಖ್ಯ ಮಂತ್ರಿಗಳು ಹಣಕಾಸಿನಮಂತ್ರಿಗಳೂ ಕೂಡ ಆಗಿದ್ದಾರೆ, ಮತ್ತು ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ಭಾಗವಹಿಸತಕ್ಕ ಸಾಮರ್ಥ್ಯ ಇರತಕ್ಕವರು. ಆದುದರಿಂದ ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಸಲಹೆ ಮಾಡುತ್ತೇನೆ. ಆದಷ್ಟು ಬೇಗನೆ ಪ್ರತಿಪಕ್ಷದವರ ಜೊತೆ, ನಮ್ಮ ಪಕ್ಷದವರ ಜೊತೆ ಚರ್ಚೆ ಮಾಡಲಾಗುವುದು, ಪ್ರತಿಷ್ಠಿತ ಹಾಗೂ ಗಂಭೀರವಾದ ಪ್ರಶ್ನೆಯ ಬಗ್ಗೆ ಉತ್ತರ ಹೇಳಿದ್ದೇನೆ.

ಇದರ ಬಗ್ಗೆ ಬರತಕ್ಕ ಸಲಹೆಗಳನ್ನು ನಾನು ಸ್ವಾಗತಿಸುತ್ತೇನೆ. ಗಗನಕ್ಕೇರಿರತಕ್ಕ ಬೆಲೆಗಳನ್ನು ಇಳಿಸುವ ದಿಸೆಯಲ್ಲಿ ರಾಜ್ಯಸರ್ಕಾರ ಖಂಡಿತವಾಗಿಯೂ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತದೆಂದು ಹೇಳಬಯಸುತ್ತೇನೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಸದಸ್ಯರಾದ ರಂಗನಾಥ್‌ರವರು ಒಂದು ಸಲಹೆಯನ್ನು ತಮ್ಮ ಮುಂದೆ ಮಂಡಿಸಿದ್ದಾರೆ. ಅದು ಸರ್ಕಾರದ ಮುಂದಿದೆ. ಇದರ ಬಗ್ಗೆ ಸದನದ ಎರಡೂ ಕಡೆಯ ಮಾನ್ಯ ಸದಸ್ಯರು ಕುಳಿತು ಗಹನವಾಗಿ ಚರ್ಚಿಮಾಡಬೇಕು. ನೀವು ಚರ್ಚೆಗೆ ಒಪ್ಪಿದ್ದೀರಾ ? ಈ ಪ್ರಶ್ನೆಯನ್ನು ತಡೆಹಿಡಿಯಬೇಕೆಂದು ನನ್ನ ಆಗ್ರಹ.

ಶ್ರೀ ಟಿ.ಎನ್. ನರಸಿಂಹಮೂರ್ತಿ : ಇದರ ಬಗ್ಗೆ ಚರ್ಚೆ ಆಗಲಿ, ಮಾನ್ಯ ಮುಖ್ಯ ಮಂತ್ರಿಗಳೇ ಖುದ್ದಾಗಿ ಸಭೆಯಲ್ಲಿದ್ದು ಉತ್ತರ ಹೇಳುತ್ತಾರೆ.

ಅಧ್ಯಕ್ಷರು : ಚರ್ಚೆ ಮಾಡೋಣ